ಆಹಾರ ಗುಣಮಟ್ಟ ಮತ್ತು ಆಹಾರ ಸುರಕ್ಷತೆ

3883(3276); ಶ್ರೀ ನಿಂಗಯ್ಯ ಬಿ.ಬಿ. (ಮೂಡಿಗೆರೆ)

ಅ) ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಆಯುಕ್ತಾಲಯ ಪ್ರತ್ಯೇಕವಾದ ನಂತರ ಆರೋಗ್ಯ ಕುಟುಂಬ ಕಲ್ಯಾಣ/ಆಯುಕ್ತಾಲಯ/ನಿರ್ದೇಶಕರ ಕಛೇರಿಗಳಲ್ಲಿ ನಡೆಸಿರುವ ಅನೂರ್ಜಿತ ಹಾಗೂ ಅನೂರ್ಜಿತಗೊಳಿಸಿದ ಪತ್ರ ವ್ಯವಹಾರಗಳು ಯಾವುವು?

ಆ) ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಆಯುಕ್ತಾಲಯ ಪ್ರತ್ಯೇಕವಾದ ನಂತರ ಆರೋಗ್ಯ ಕುಟುಂಬ ಕಲ್ಯಾಣ/ಆಯುಕ್ತಾಲಯ/ನಿರ್ದೇಶಕರ ಕಛೇರಿಗಳಲ್ಲಿ ನಡೆಸಿರುವ ಪತ್ರ ವ್ಯವಹಾರ ಅನೂರ್ಜಿತಗೊಳಿಸಲು ಸರ್ಕಾರವು ಇಲ್ಲಿಯವರೆಗೂ ತೆಗೆದುಕೊಂಡ ಕ್ರಮಗಳು ಯಾವುವು?

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಆಯುಕ್ತರ ಕಾರ್ಯಾಲಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಒಂದು ಭಾಗವಾಗಿ ಕಾರ್ಯನಿರ್ವಹಿಸುತ್ತಿದೆ. ಇದು ಪ್ರತ್ಯೇಕ ಇಲಾಖೆಯಾಗಿ ಕಾರ್ಯನಿರ್ವಹಿಸುತ್ತಿಲ್ಲ.

ಆ) ಅನ್ವಯಿಸುವುದಿಲ್ಲ.

ಸಾರಿಗೆ ಸಂಸ್ಥೆಯ ಅಭಿವೃದ್ಧಿ ಕಾಮಗಾರಿ

3884(3363); ಶ್ರೀ ಪಾಟೀಲ್ ಎ.ಎಸ್ (ದೇವರಹಿಪ್ಪರಗಿ)

ಅ) ಬಿಜಾಪುರ ಜಿಲ್ಲೆಯಲ್ಲಿ ಕಳೆದ 2013–14ನೇ ಸಾಲಿನಿಂದ ಇಲ್ಲಿಯವರೆಗೆ ಈಶಾನ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಯಾವ ಯೋಜನೆಗಳು/ಅಭಿವೃದ್ಧಿ ಕಾಮಗಾರಿಗಳು ಮಂಜೂರಾಗಿವೆ (ವಿಧಾನಸಭಾ ಕ್ಷೇತ್ರವಾರು ಕಾಮಗಾರಿ ಹೆಸರು ಸಮೇತ ಅನುದಾನದ ವಿವರಗಳೊಂದಿಗೆ ಮಾಹಿತಿ ಒದಗಿಸುವುದು);

ಆ) ಮಂಜೂರಾದ ಕಾಮಾರಿಗಳು/ಯೋಜನೆಗಳು ಪ್ರಸ್ತುತ ಯಾವ ಹಂತದಲ್ಲಿವೆ (ವಿಧಾನಸಭಾ ಕ್ಷೇತ್ರವಾರು ಪ್ರತ್ಯೇಕ ವಿವರ ನೀಡುವುದು)?

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು)

ಅ) ಬಿಜಾಪುರ ಜಿಲ್ಲೆಯಲ್ಲಿ ಕಳೆದ 2013–14ನೇ ಸಾಲಿನಿಂದ ಇಲ್ಲಿಯವರೆಗೆ ಈಶಾನ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಮಂಜೂರಾದ ಯೋಜನೆಗಳು/ಅಭಿವೃದ್ಧಿ ಕಾಮಗಾರಿಗಳ ವಿವರಗಳನ್ನು ವಿಧಾನ ಸಭಾ ಕ್ಷೇತ್ರವಾರು **ಅನುಬಂಧ–ಅ** ರಲ್ಲಿ ಒದಗಿಸಿದೆ.

ಆ) ಮಂಜೂರಾದ ಕಾಮಾರಿಗಳು/ಯೋಜನೆಗಳ ಪ್ರಸ್ತುತ ಹಂತದ ವಿವರಗಳನ್ನು **ಅನುಬಂಧ–ಅ** ರಲ್ಲಿ ಒದಗಿಸಿದೆ.

ಅನುಬಂಧ 'ಅ' ಎಲ್.ಎ.ಕ್ಯೂ 3363

ಬಿಜಾಪೂರ ಜಿಲ್ಲೆಯಲ್ಲಿ ಕಳೆದ 2013–14 ನೇ ಸಾಲಿನಿಂದ ಇಲ್ಲಿಯವರೆಗೆ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಿಂದ ಮಂಜೂರಾದ ಯೋಜನೆಗಳು/ಅಭಿವೃದ್ಧಿ ಕಾಮಗಾರಿಗಳ ವಿವರ.

ಕ್ರಸಂ	ವಿಧಾನ ಸಭಾ ಕ್ಷೇತ್ರ	ಕಾಮಗಾರಿಯ ಹೆಸರು	2013–14ನೇ ಸಾಲಿನಿಂದ ಇಲ್ಲಿಯವರೆಗೆ ಅಳವಡಿಸಲಾದ ಮೊತ್ತ ₹ ಲಕ್ಷಗಳಲ್ಲಿ	ಶರಾ
01	ಮುದ್ದೇಬಿಹಾಳ	ಮುದ್ದೇಬಿಹಾಳ ಬಸ್ ನಿಲ್ದಾಣದ ವಿಸ್ತರಣೆ ಹಾಗೂ ಅಭಿವೃದ್ಧಿ.	220.00 (ವಿಶೇಷ ಅಭಿವೃದ್ಧಿ ಯೋಜನೆ)	ಸದರಿ ಕಾಮಗಾರಿಯ ಪ್ರಸ್ತುತ ಛಾವಣಿಯ ಹಂತಕ್ಕೆ ಬಂದಿರುತ್ತದೆ.
02	ಮುದ್ದೇಬಿಹಾಳ	ತಾಳಿಕೋಟೆಯಲ್ಲಿ ಬಸ್ ನಿಲ್ದಾಣವನ್ನು ಪುನರ್ ನಿರ್ಮಿಸುವುದು.	200.00 (ವಿಶೇಷ ಅಭಿವೃದ್ಧಿ ಯೋಜನೆ)	ಪ್ರಸ್ತುತ ಹಳೆ ಶಿಥಿಲಗೊಂಡ ಬಸ್ ನಿಲ್ದಾಣ ಒಡೆದು ಹಾಕುವ ಪ್ರಕ್ರಯೆ ಜಾರಿಯಲ್ಲಿದೆ.
03	ಬಿಜಾಪೂರ	ಬಿಜಾಪೂರ ಬಸ್ ಘಟಕ–01 ರ ಆವರಣಕ್ಕೆ ಕಾಂಕ್ರೀಟ್ ಅಳವಡಿಸುವ ಕಾಮಗಾರಿ.	135.00 (ವಿಶೇಷ ಅಭಿವೃದ್ಧಿ ಯೋಜನೆ)	ಕಾಮಗಾರಿ ಪೂರ್ಣಗೊಂಡಿದೆ.
04	ಬಸವನ ಬಾಗೇವಾಡಿ.	ಬಸವನ ಬಾಗೇವಾಡಿ ಬಸ ಘಟಕದಲ್ಲಿ ದುರಸ್ಥಿ ಅಂಕಣವನ್ನು ವಿಸ್ತರಿಸುವುದು ಹಾಗೂ ಆವರಣಕ್ಕೆ ಕಾಂಕ್ರೀಟ ಅಳವಡಿಸುವ ಕಾಮಗಾರಿ.	165.00 (ವಿಶೇಷ ಅಭಿವೃದ್ಧಿ ಯೋಜನೆ)	ಕಾಮಗಾರಿ ಪೂರ್ಣಗೊಂಡಿದೆ.
05	ನಾಗಠಾಣ	ಚಡಚಣವಲ್ಲಿ ಬಸ್ ನಿಲ್ದಾಣವನ್ನು ಪುನರ್ ನಿರ್ಮಿಸುವುದು.	150.00 (ವಿಶೇಷ ಅಭಿವೃದ್ಧಿ ಯೋಜನೆ)	ಕಾಮಗಾರಿ ಪ್ರಾರಂಭಿಸಬೇಕಿರುತ್ತದೆ.
06	ಬಬಲೇಶ್ವರ	ಬಬಲೇಶ್ವರದಲ್ಲಿ ಬಸ್ ನಿಲ್ದಾಣವನ್ನು ಪುನರ್ ನಿರ್ಮಿಸುವುದು.	120.00 (ವಿಶೇಷ ಅಭಿವೃದ್ಧಿ ಯೋಜನೆ)	ಪ್ರಸ್ತುತ ಹಳೆ ಶಿಥಿಲಗೊಂಡ ಬಸ್ ನಿಲ್ದಾಣ ಒಡೆದು ಹಾಕುವ ಪ್ರಕ್ರಯೆ ಜಾರಿಯಲ್ಲಿದೆ.

07	ಬಿಜಾಪೂರ	ತಿಕೋಟಾದಲ್ಲಿ ಬಸ್ ನಿಲ್ದಾಣವನ್ನು ಪುನರ್ ನಿರ್ಮಿಸುವುದು.	125.00 (ವಿಶೇಷ ಅಭಿವೃದ್ಧಿ ಯೋಜನೆ)	ಟೆಂಡರ್ ಕರೆಯಲಾಗಿದೆ.
08	ಮುದ್ದೇಬಿಹಾಳ	ನಲವತವಾಡದಲ್ಲಿ ಬಸ್ ನಿಲ್ದಾಣವನ್ನು ವಿಸ್ತರಿಸುವುದು.	120.00 (ವಿಶೇಷ ಅಭಿವೃದ್ಧಿ ಯೋಜನೆ)	ಮರು ಟೆಂಡರ್ ಕರೆಯಲಾಗಿದೆ.
09	ದೇವರ ಹಿಪ್ಪರಗಿ	ದೇವರ ಹಿಪ್ಪರಗಿ ಬಸ್ ನಿಲ್ದಾಣದ ಅಭಿವೃದ್ಧಿ.	85.00 (ಸಂಸ್ಥೆಯ ಆಂತರಿಕ ಸಂಪನ್ಮೂಲದಲ್ಲಿ)	ಕಾಮಗಾರಿ ಪ್ರಸ್ತಾವನೆಯಲ್ಲಿದೆ.
10	ದೇವರ ಹಿಪ್ಪರಗಿ	ಹೂವಿನ ಹಿಪ್ಪರಗಿಯಲ್ಲಿ ನೂತನ ಬಸ್ ನಿಲ್ದಾಣವನ್ನು ನಿರ್ಮಿಸುವುದು.	120.00 (ವಿಶೇಷ ಅಭಿವೃದ್ಧಿ ಯೋಜನೆ)	ಪ್ರಸುತ ಹಳೆ ಶಿಥಿಲಗೊಂಡ ಬಸ್ ನಿಲ್ದಾಣ ಒಡೆದು ಹಾಕುವ ಪ್ರಕ್ರಯೆ ಜಾರಿಯಲ್ಲಿದೆ.
11	ಬಸವನ ಬಾಗೇವಾಡಿ.	ನಿಡಗುಂದಿ ಬಸ್ ನಿಲ್ದಾಣದ ಅಭಿವೃದ್ಧಿ.	50.00 (ವಿಶೇಷ ಅಭಿವೃದ್ಧಿ ಯೋಜನೆ)	ಟೆಂಡರ್ ಪ್ರಕ್ರಯೆ ಜಾರಿಯಲ್ಲಿದೆ.
12	ಸಿಂದಗಿ	ಕಲಕೇರಿ ಬಸ್ ನಿಲ್ದಾಣದ ಅಭಿವೃದ್ಧಿ.	40.00 (ವಿಶೇಷ ಅಭಿವೃದ್ಧಿ ಯೋಜನೆ)	ಪ್ರಸ್ತಾವನೆಯಲ್ಲಿದೆ.
13	ಬಿಜಾಪೂರ	ಬಿಜಾಪೂರದಲ್ಲಿ ನಗರ ಸಾರಿಗೆ ಬಸ್ ಘಟಕವನ್ನು ನಿರ್ಮಿಸುವ ಕಾಮಗಾರಿ	313.00 (ಕೇಂದ್ರ ಸರ್ಕಾರ ಜೆ.ಎನ್.ನರ್ಮ ಯೋಜನೆಯಡಿಯಲ್ಲಿ)	ಪ್ರಸ್ತುತ ಕಾಮಗಾರಿಯು ಭಾವಣಿ ಹಂತದಲ್ಲಿರುತ್ತದೆ.